ಮೆಃ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ ನ್ಯಾಯಾಲಯ, ಮುಧೋಳ

ಸಿ.ಸಿ ನಂ-66/2017

ಚಾಸಾ-02 ಪ್ರಾಸಾ-01

| | |
|---|---|
| ಹೆಸರು | ವಿಠ್ಠಲ ಹನಮಂತ ದಳವಾಯಿ |
| ತಂದೆಯ ಹೆಸರು | ಹನಮಂತ ದಳವಾಯಿ |
| ವಯಸ್ಸು | 35 ವರ್ಷ |
| ಉದ್ಯೋಗ | ಲೈನ್ ಮನ್ |
| ವಾಸ ಸ್ಥಳ | ಯಡಹಳ್ಳಿ ಮುಧೋಳ. |

**ದಿನಾಂಕಃ 08-02-2023 ರಂದು ಸಾಕ್ಷಿಯನ್ನು ಕರೆದು ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ- ಶ್ರಿ. ಎ.ಪಿ.ಪಿ., ರವರಿಂದ ಃ**

ಚಾಸಾ-೩ ನನ್ನ ಸಹೋದ್ಯೋಗಿ, ಈಗ ಅವರು ಮೃತರಾಗಿರುತ್ತಾರೆ.

ದಿ: 13-10-2013 ರಂದು ಬೆಳಿಗ್ಗೆ 7-30 ರಿಂದ 9-30 ಗಂಟೆಯವರೆಗೆ ನನ್ನ ಮತ್ತು ಚಾಸಾ-೩ ರ ಸಮಕ್ಷಮ ಚಾಸಾ-೧ ರವರು ತೋರಿಸಿದ ಮುಧೋಳದ ಭಾರತಿ ಮೊಹನಲಾಲ ಮೋರಾ ಇವರ ಗೋಡಾವನ ದಲ್ಲಿ ಆರೋಪಿತರು ಟ್ರಾನ್ಸಾಪಾರ್ಮರಗಳನ್ನು ತಯಾರಿಸಿದ್ದರು. ಪೊಲೀಸರು ನಮ್ಮ ಸಮಕ್ಷಮ ಪಂಚನಾಮೆ ಜರುಗಿಸಿದರು. ಸಾಕ್ಷಿ ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-1 ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು. ಚಾಸಾ-೩ ರವರು ನಿಪಿ-೧ ಕ್ಕೆ ನನ್ನ ಸಮಕ್ಷಮ ಸಹಿ ಮಾಡಿರುತ್ತಾರೆ. ಸಾಕ್ಷಿಗೆ ಚಾಸಾ-೩ ರವರ ಸಹಿ ತೋರಿಸಲಾಗಿ ಅದನ್ನು ನೋಡಿ ಗುರುತಿಸಿದ್ದು, ಸದರಿ ಸಹಿಯನ್ನು ನಿಪಿ-1 ಬಿ ಎಂದು ಗುರುತಿಸಲಾಯಿತು.

ಅದೇ ದಿನ ಪೊಲೀಸರು ನನ್ನನ್ನು ಠಾಣೆಗೆ ಕರೆದಿದ್ದರು. ಅಲ್ಲಿ ಚಾಸಾ-೩ ರವರು ಇದ್ದರು. ನಮ್ಮ ಸಮಕ್ಷಮ ಪಂಚನಾಮೆ ಜರುಗಿಸಿ ನಮ್ಮ ಸಹಿ ಪಡೆದುಕೊಂಡರು. ಸದರಿ ಪಂಚನಾಮೆಯನ್ನು ನಿಪಿ-2 ಎಂದು , ಅದರಲ್ಲಿ ಸಾಕ್ಷಿ ಸಹಿಯನ್ನು ನಿಪಿ-2 ಎ ಎಂದು ಗುರುತಿಸಲಾಯಿತು. ಚಾಸಾ-೩ ರವರು ನಿಪಿ-2 ಕ್ಕೆ ನನ್ನ ಸಮಕ್ಷಮ ಸಹಿ ಮಾಡಿರುತ್ತಾರೆ. ಸಾಕ್ಷಿಗೆ ಚಾಸಾ-೩ ರವರ ಸಹಿ ತೋರಿಸಲಾಗಿ ಅದನ್ನು ನೋಡಿ ಗುರುತಿಸಿದ್ದು, ಸದರಿ ಸಹಿಯನ್ನು ನಿಪಿ-2 ಬಿ ಎಂದು ಗುರುತಿಸಲಾಯಿತು. ಠಾಣೆಯಲ್ಲಿ ನನಗೆ ಚಾಸಾ-೧ ರವರು ಹಾಜರುಪಡಿಸಿದ ಕಾರ್ತೀಕ ಎಲೆಕ್ಟ್ರಿಕಲ್ಸ ಇವರ ಟ್ರಾನ್ಸಾಪಾರ್ಮರ ಟೆಸ್ಟ ಸರ್ಟಿಫಿಕೇಟನ ೪ ನಕಲು ಪ್ರತಿಗಳನ್ನು ನನಗೆ ತೋರಿಸಿದರು. ಸಾಕ್ಷಿ ಸದರಿ ದಾಖಲೆಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-3 ರಿಂದ 6 ಎಂದು ಗುರುತಿಸಲಾಯಿತು.

**<u>ಪಾಟಿ ಸವಾಲು: ಆರೋಪಿ ಪರ ವಕೀಲರಿಂದ</u>**

ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ನ್ಯಾಯಾಧೀಶರು ವ ಜೆಎಂಎಫ್‌ಸಿ
ಮುಧೋಳ.

ಸಾಕ್ಷಿಯ ಸಹಿ